
## ರಕ್ಕಸ ಮರಿಹುಳ 'ಕ್ಯಾಟರ್ ಪಿಲ್ಲರ್'

ಬೆಳಿಗ್ಗೆ ನಾಚಿಕೆ ಮುಳ್ಳಿನ ಎಲೆಗಳೊಡನೆ ಆಡುತ್ತಿರಬೇಕಾದರೆ ಸಣ್ಣ ಕಾಂಡದ ಮೇಲೆ ಕಂಬಳಿಹುಳದ ಜಾತಿಗೆ ಸೇರಿದ ದಪ್ಪ, ಹಸುರಿನ ದೈತ್ಯ ರಾಕ್ಷಸದ ಮರಿ ಹುಳ (ಕ್ಯಾಟರ್ ಪಿಲ್ಲರ್) ಮಲಗಿತ್ತು. ಪಕ್ಕದಲ್ಲಿ ಲಿಂಬೆ ಗಿಡದ ಚಿಗುರೆಲೆಗಳನ್ನು ತಿಂದು ಗಡದ್ದಾಗಿ ವಿಶ್ರಮಿಸಿತ್ತು. ಎಷ್ಟು ಗಟ್ಟಿಯಾಗಿ ಕಡ್ಡಿಯಿಂದ ದೂಡಿದರೂ, ಒಂದಿಷ್ಟೂ ಮಿಸುಕಾಡದೆ ಇತ್ತು. ಮೊಬೈಲ್ ಕ್ಯಾಮೆರಾದಿಂದ ಹತ್ತಿರ ಫೋಟೊ ತೆಗೆಯಲು ಹೋದರೆ, 'ನನ್ನ ನಿದ್ದೆಗೆ ಯಾಕೆ ತೊಂದರೆ ಕೊಡುತ್ತೀಯಾ?' ಎಂದು ನೋಡುವಂತಿತ್ತು. ಉಳಿದ ಗಿಡಗಳನ್ನು ತಿನ್ನಬಾರದು ಎಂದು ಕೊನೆಗೆ ಕತ್ತರಿಯಲ್ಲಿ ಆ ಕಾಂಡವನ್ನು ಕತ್ತರಿಸಿ ಹೊರಗೆ ಬಿಸಾಡಲಾಯಿತು.

—ತನುಜಾ ಡಿ. ಸೋಮಯಾಜಿ, ಬೆಂಗಳೂರು





## ಹರಕೆಯ ಕಾಯಿಗಳು ಹೀಗೂ ಉಂಟೆ

ಇತ್ತೀಚೆಗೆ ಚಾರ್ ಧಾಮ್ ಯಾತ್ರೆಯಲ್ಲಿ ಗಂಗೋತ್ರಿಗೆ ಹೋಗುವ ಮುನ್ನಾ ದಿನ ಉತ್ತರ ಕಾಶಿಯಲ್ಲಿ ಕಾಶಿ ವಿಶ್ವನಾಥ ಮಂದಿರಕ್ಕೆ ಹೋಗಿದ್ದೆವು. ಹಾಗೆಯೇ ಆ ಮಂದಿರದ ಪಕ್ಕದಲ್ಲಿದ್ದ ಹನುಮಾನ್ ಮಂದಿರಕ್ಕೂ ಹೋಗಿದ್ದೆವು. ಅಲ್ಲಿ ಒಂದು ಕಂಬಕ್ಕೆ ನೂರಾರು ತೆಂಗಿನಕಾಯಿಗಳನ್ನು ಕಟ್ಟಿದ್ದು ಕಂಡಿತು. ಯಾವ ಕಾರಣಕ್ಕೆ ಕಾಯಿ ಕಟ್ಟಿದ್ದಾರೆ ಎಂದು ಅಲ್ಲಿದ್ದವರನ್ನು ನಾನು ಕೇಳಿದೆ. ಅದಕ್ಕೆ ಅವರಿಂದ ಬಂದ ಉತ್ತರವನ್ನು ಕೇಳಿ ಆಶ್ಚರ್ಯವಾಯಿತು. ಮುಂಚೆಯಿಂದ ಇಲ್ಲಿ ಹರಕೆ ಕಾಯಿ ಕಟ್ಟುವ ಪದ್ಧತಿ ಇರಲಿಲ್ಲ. ಆದರೆ, ದೇವಸ್ಥಾನದ ಹೊರಗಡೆ ತೆಂಗಿನಕಾಯಿ ಮಾರುವ ವ್ಯಾಪಾರಿಗಳ ವ್ಯಾಪಾರ ತಂತ್ರದಿಂದ ಈ ದೇವಸ್ಥಾನದಲ್ಲಿ ಕಾಯಿ ಕಟ್ಟುವ ಪದ್ಧತಿ ಈಚೆಗೆ ಉದ್ಭವಗೊಂಡಿದೆಯಂತೆ. ಅವರ ಮಾತು ಕೇಳಿದ ಮೇಲೆ ನನಗೆ ನೆನಪಿಗೆ ಬಂದದ್ದು 'ವ್ಯಾಪಾರಂ ದ್ರೋಹ ಚಿಂತನಂ' ಅನ್ನೋ ಮಾತು.

—ಪಿ.ಹೆಚ್. ಪಾಟೀಲ್, ರಾಣೆಬೆನ್ನೂರು





## ಜಂಬೋ ಗಾತ್ರದ 'ಶಿವಬೇಲ್'

ಉತ್ತರ ಭಾರತ ಪ್ರವಾಸಕ್ಕೆ ಹೋಗಿದ್ದೆ. ಹರಿದ್ವಾರದ ರೈಲು ನಿಲ್ದಾಣ ಸಮೀಪ ತಳ್ಳುಗಾಡಿಯೊಂದರಲ್ಲಿದ್ದ ಅಪರೂಪದ ಹಣ್ಣುಗಳು ನಮ್ಮ ಗಮನ ಸೆಳೆದವು. ಸಿಪ್ಪೆ ಸುಲಿಯದ ತೆಂಗಿನಕಾಯಿ ಗಾತ್ರದ ಆ ಹಣ್ಣುಗಳನ್ನು ನಾವು ಈ ಮೊದಲು ಎಲ್ಲೂ ನೋಡಿರಲಿಲ್ಲ. ಕುತೂಹಲದಿಂದ ಗಾಡಿಯವನನ್ನು ವಿಚಾರಿಸಿದಾಗ, ಅವು 'ಶಿವ ಬೇಲ್' (ಶಿವ ಬಿಲ್ವ) ಹಣ್ಣುಗಳೆಂದು ತಿಳಿಯಿತು.

ಟೆನಿಸ್‌ಬಾಲ್ ಗಾತ್ರದ ಬಿಲ್ವಹಣ್ಣುಗಳನ್ನು ಮಾತ್ರ ನೋಡಿದ್ದ ನಮಗೆ, ಇದು ಬಿಲ್ವದ ವಿಶೇಷ ಜಾತಿಯಾಗಿದ್ದು, ಅಮೂಲ್ಯವಾದ ಔಷಧೀಯ ಗುಣಗಳನ್ನು ಹೊಂದಿದೆ ಎಂಬ ಮಾಹಿತಿಯಿಂದ ಅಚ್ಚರಿಯಾಯಿತು. 'ಶಿವಬೇಲ್' ಜ್ಯೂಸ್ ಸೇವನೆಯಿಂದ ಹೊಟ್ಟೆ ನೋವು, ಆಮ್ಲಪಿತ್ತ, ಅಜೀರ್ಣ, ಮಲಬದ್ಧತೆ ಮೊದಲಾದ ಸಮಸ್ಯೆಗಳು ನಿವಾರಣೆಯಾಗುತ್ತವೆ. ವಾತ, ಪಿತ್ತ, ಕಫದ ದೋಷಗಳನ್ನು ಸಮತೋಲನಗೊಳಿಸುವ ಈ ಪಾನೀಯ ದೇಹವನ್ನು ಶುದ್ಧಗೊಳಿಸುತ್ತದೆ. ಬಿಸಿಲಿನಲ್ಲಿ ಶರೀರಕ್ಕೆ ತಂಪುಶಕ್ತಿ ನೀಡಿ ಬಾಯಾರಿಕೆಯನ್ನು ನಿವಾರಿಸುತ್ತದೆ ಎಂದು ಆ ಗಾಡಿಯವನು ವಿವರಿಸಿದ. ಈ ಹಣ್ಣಿನ ಜ್ಯೂಸ್ ಅನ್ನು ಅಲ್ಲಿಯೇ ಇದ್ದ ಸಣ್ಣ ಯಂತ್ರದ ಮೂಲಕ ತಯಾರಿಸಿ ಕೊಡುತ್ತಿದ್ದರು. ಬೆಲೆ 20 ರೂಪಾಯಿ ಮಾತ್ರ. ವಿಶಿಷ್ಟ ಪರಿಮಳ ಮತ್ತು ನೈಸರ್ಗಿಕ ರುಚಿಯಿಂದ ತುಂಬಿದ್ದ ಆ 'ಶಿವಬೇಲ್' ಜ್ಯೂಸ್ ನಿಜಕ್ಕೂ ಅನನ್ಯ ಅನುಭವ ನೀಡಿತು. ಹರಿದ್ವಾರದ ಆ ಪಾವನ ನೆಲೆಯಲ್ಲಿ ನಾವು ಸೇವಿಸಿದ ಪ್ರಕೃತಿ ನೀಡಿದ ಅಮೂಲ್ಯ ಹಣ್ಣಿನ ಪಾನೀಯದ ಸವಿ ನೆನಪು ಸದಾಕಾಲ ಮನಸ್ಸಿನಲ್ಲಿ ಉಳಿಯುವಂಥದ್ದಾಗಿದೆ.

—ಜಿ. ಪದ್ಮಾ, ಸಂಡೂರು